ಶ್ರೀ ಶಿವರಾಜ್ ಎಸ್. ತಂಗಡಗಿ (ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು) :

ಅ) ಕೇಂದ್ರ ಸರ್ಕಾರದ ಟಿ.ಪಿ.ಡಿ.ಎನ್ ಅಡಿಯಲ್ಲಿ ಪ್ರತಿ ಮಾಹೆ ರಾಜ್ಯಕ್ಕೆ 8697 ಮೆಟ್ರಿಕ್ ಟನ್ ಲೆವಿ ಸಕ್ಕರೆಯನ್ನು ಕರ್ನಾಟಕ ರಾಜ್ಯಕ್ಕೆ ಬಿಡುಗಡೆ ಮಾಡುತ್ತಿದ್ದು, ರಾಜ್ಯದ ಬಿ.ಪಿ.ಎಲ್ ಹಾಗೂ ಅಂತ್ಯೋದಯ ಅನ್ನ ಯೋಜನೆ ಪಡಿತರ ಚೀಟಿದಾರರಿಗೆ, ಪ್ರತಿ ಪಡಿತರ ಚೀಟಿಗೆ 1 ಕೆ.ಜಿ.ಯಂತೆ ಪ್ರತಿ ಮಾಹೆ ಸಾರ್ವಜನಿಕ ವಿತರಣಾ ಪದ್ದತಿಯಡಿಯಲ್ಲಿ ಹಂಚಿಕೆ ಮಾಡಲಾಗುತ್ತಿದೆ.

ಆ) ದಿನಾಂಕ: 31.01.2010 ರಲ್ಲಿದ್ದಂತೆ 9.38 ಲಕ್ಷ ಮೆ. ಟನ್ ಸಕ್ಕರೆ ದಾಸ್ತಾನು ಇರುತ್ತದೆ.

ಇ) ಕೇಂದ್ರ ಸರ್ಕಾರದಿಂದ ಹಂಚಿಕೆಯಾದ ಲೆವಿ ಸಕ್ಕರೆಯನ್ನು ಪಡಿತರ ವ್ಯವಸ್ಥೆಯಡಿ ವಿತರಣೆ ಮಾಡುತ್ತಿರುವುದರಿಂದ ಸಕ್ಕರೆ ಆಮದು ಮಾಡಿಕೊಳ್ಳುವ ವಿಷಯ ರಾಜ್ಯ ಸರ್ಕಾರದ ಮುಂದಿಲ್ಲ.

ಎ.ಪಿ. ಎಂ.ಸಿ. ಕಾನೂನಿನ ಅನುಷ್ಠಾನ

500 (765) ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ) : ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2007 ಜುಲೈನಲ್ಲಿ ರೈತರ ಹಿತದೃಷ್ಟಿಯಿಂದ ಎ.ಪಿ.ಎಂ.ಸಿ ಕಾನೂನಿಗೆ ಮಾಡಿರುವ ಬದಲಾವಣೆಗಳು ಹಾಗೂ ಹೊಸ ಕಾನೂನುಗಳು ಬಹಳಷ್ಟು ಮಾರುಕಟ್ಟೆಗಳಲ್ಲಿ ಅನುಷ್ಠಾನಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕರ್ನಾಟಕ ಕೃಷಿ ಉತ್ಪನ್ನ ಮಾರಾಟ ಶಾಸನದ ಕಲಂ 75, 78, 78ಎ ಯಾವಾಗಿನಿಂದ ಜಾರಿಗೊಳಿಸಲಾಗಿದೆ;

ಇ) ಈ ಕಲಂಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುತ್ತಿರುವ ಎ.ಪಿ.ಎಂ.ಸಿ ಗಳು ಯಾವುವು; ಅನುಷ್ಠಾನಗೊಳಿಸದೇ ಇರುವ ಎ.ಪಿ.ಎಂ.ಸಿ. ಗಳು ಯಾವುವು;

ಈ) ರಾಜ್ಯದ ಎಲ್ಲಾ ಎ.ಪಿ.ಎಂ.ಸಿ.ಗಳಲ್ಲಿ ಕಟ್ಟುನಿಟ್ಟಾಗಿ ಇದೇ ಸಾಲಿನಿಂದ ಜಾರಿಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಊ) ಎ.ಪಿ.ಎಂ.ಸಿ. ಕಾನೂನಿನ ಕಲಂ 77ಎ ಅನ್ನು ಯಾವ್ಯಾವ ಕೃಷಿ ಉತ್ಪನ್ನಗಳಿಗೆ ಅನ್ವಯಿಸಿ ಜಾರಿಗೊಳಿಸಲಾಗಿದೆ;

ಋ) ಇದನ್ನು ಎಲ್ಲಾ ಕೃಷಿ ಉತ್ಪನ್ನಗಳಿಗೆ ಅನ್ವಯಿಸಿ ಜಾರಿಗೊಳಿಸಲು ಎಷ್ಟು ಸಮಯ ಬೇಕಾಗುವುದು?

ಶ್ರೀ ಶಿವರಾಜ್ ಎಸ್. ತಂಗಡಗಿ (ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು) :

ಅ) ಈ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಹಾಲಿ ಇದ್ದ ಕಲಂ 75ಕ್ಕೆ ತಿದ್ದುಪಡಿ ಮಾಡಿ ದಿ: 16/08/2007 ರಿಂದ ಜಾರಿಗೆ ನೀಡಲಾಗಿದೆ.

ಕಲಂ 78ಎ ಅನ್ನು ಹೊಸದಾಗಿ ಸೇರ್ಪಡೆಗೊಳಿಸಿ ದಿ:16/08/2007 ರಿಂದ ಜಾರಿಗೆ ನೀಡಲಾಗಿದೆ.

ಹಾಲಿ ಇದ್ದ ಕಲಂ 78ಕ್ಕೆ ತಿದ್ದುಪಡಿ ಮಾಡಿ ದಿ: 01/07/2008 ರಿಂದ ಜಾರಿಗೆ ನೀಡಲಾಗಿದೆ.

ಇ) ಕಾಯ್ದೆಯಲ್ಲಿನ ಮೇಲ್ಕಂಡ ಅವಕಾಶಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸದೆ ಇರುವುದನ್ನು ಗಮನಿಸಿ ದಿ: 18/02/2010 ರಲ್ಲಿ ಸುತ್ತೋಲೆ ನಿರ್ದೇಶನಗಳನ್ನು ನೀಡಲಾಗಿದೆ. ಸದರಿ ನಿರ್ದೇಶನಗಳ ಪಾಲಿಸುವಿಕೆ ಕುರಿತು ಕಾಲಕಾಲಕ್ಕೆ ಪರಿಶೀಲನೆ ನಡೆಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು.

ಈ) ಹಂತ ಹಂತವಾಗಿ ಕ್ರಮ ಕೈಗೊಳ್ಳಲಾಗುವುದು.

ಉ) ರಾಜ್ಯದ ಎಲ್ಲಾ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಅನ್ವಯಿಸುವಂತೆ ಮೆಕ್ಕೆಜೋಳವನ್ನು ಕೃಷಿ ಉತ್ಪನ್ನವೆಂದು ಸರ್ಕಾರವು ಅಧಿಸೂಚನೆ ಸಂ:ಸಇ/430/ಮಾಇಸ್ಇ/2006, ದಿ: 10/07/2008 ರಲ್ಲಿ ಅಧಿಸೂಚಿಸಿದೆ.

ಊ) ಹಂತ ಹಂತವಾಗಿ ಜಾರಿಗೊಳಿಸಲಾಗುವುದು.